ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ದೇವರು ಹೆಣ್ಣಿಗೆ ನಾಲಿಗೆ ಕೊಡದಿದ್ದರೆ ಜಗತ್ತು ಹೇಗಿರುತ್ತಿತ್ತು?*



ಅರ್ಧ ಜಗತ್ತೇ ಸೈಲೆಂಟ್ ಮೋಡ್‌ನಲ್ಲಿರುತ್ತಿತ್ತು!

ರಮೇಶ. ಜ. ಬೊಂಗಾಳೆ

*ಗಟ್ಟಿಯಾಗಿ ಮಾತನಾಡುವವರಿಗೆ ನಿಮ್ಮ ಕಿವಿಮಾತೇನು ರಾಂಜಿ?*

'ಧಿಕ್ಕಾರೇಶ್ವರ ರ್‍ಯಾಲಿ ಸರ್ವೀಸ್' ಆರಂಭಿಸಿ. ಪ್ರತಿದಿನ ಬಾಯ್ತುಂಬ ಕೆಲಸವಿರುತ್ತದೆ.

ಬಿ.ವಿ. ನಾರಾಯಣ್, ಬೆಳಗೊಳ

*ನ್ಯಾಯಾಲಯಗಳಲ್ಲಿ ನ್ಯಾಯದೇವತೆಯೇ ಕಾಣುತ್ತಿಲ್ಲವಲ್ಲ...?*

ಅದು ಬಾದಾಮಿ ಹಾಲಿನಲ್ಲಿನ ಬಾದಾಮಿಯಂತೆ; ಕೆಲವೊಮ್ಮೆ, ಕೆಲವೆಡೆ ಮಾತ್ರ ಇರುತ್ತದೆ.

ಸುನಂದ ಲೋಕೇಶರೆಡ್ಡಿ, ದಾವಣಗೆರೆ

*ರಾಜಕಾರಣಿಗಳು ಹಿಂದಿನ ಜನ್ಮದಲ್ಲಿ ಲಾಂಗ್‌ಜಂಪ್, ಹೈಜಂಪ್ ಚಾಂಪಿಯನ್‌ಗಳಾಗಿದ್ದರು ಅನ್ನಿಸುತ್ತದೆ, ಅಲ್ಲವೇ?*



ಇಷ್ಟೆಲ್ಲಾ ಸುತ್ತಿ ಬಳಸಿ ಹೇಳುವುದರ ಬದಲು ಕೋತಿಗಳಾಗಿದ್ದರು ಎಂದು ನೇರವಾಗೇ ಹೇಳಿದರಾಯಿತು!

ಪಿ.ಜೆ. ರಾಘವೇಂದ್ರ, ಮೈಸೂರು

*ಬ್ರಹ್ಮ, ವಿಷ್ಣು, ಮಹೇಶ್ವರರಿಗೂ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಕ್ಕೂ ಏನು ವ್ಯತ್ಯಾಸ?*

ಅವರದು ಲೋಕಕಲ್ಯಾಣ, ಇವುಗಳದು ಲೋಕಲ್ ಕಲ್ಯಾಣ.

ಕೆ. ಶ್ರೀಶಲ್ ಹೆಬ್ಬಾರ್, ಹರಪನಹಳ್ಳಿ

*ಕತ್ತೆ, ನಾಯಿ ಎಂದೆಲ್ಲಾ ಮನುಷ್ಯರಿಗೆ ಬೈತಾರಲ್ಲಾ, ಅವುಗಳಿಗೆ ಅವಮಾನವಾಗೋಲ್ವಾ?*

ಆಗುತ್ತದೆ. ಅವಮಾನದಿಂದ ತಲೆ ಎತ್ತಲಾಗದುದರಿಂದಲೇ ಅವು ತಲೆ ತಗ್ಗಿಸಿ ನಡೆಯುವುದು.

ಬಾ.ರಂ. ಸುರೇಶ್, ಶಿವಮೊಗ್ಗ

*ಚಟಕ್ಕೂ, ಚಟ್ಟಕ್ಕೂ ಏನು ಸಂಬಂಧ?*

ಚಟ ದೇಹವನ್ನು ಭೂಮಿಯ ಮಟ್ಟಕ್ಕೆ ಮಲಗಿಸುತ್ತದೆ. ಚಟ್ಟ ಆರು ಅಡಿ ಕೆಳಕ್ಕೆ ಒಯ್ಯುತ್ತದೆ.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

*ಎಲ್ಲಿ ನೋಡಿದರೂ 'ಮೀಸಲಾತಿ ಕಡ್ಡಾಯ' ಎಂಬ ಫಲಕ! 'ಅರ್ಹತೆ ಕಡ್ಡಾಯ' ಎಂಬ ಘೋಷಣೆಯೂ ಬರಬಹುದೆ?*

ಊಹೂಂ; 'ಕಡ್ಡಾಯ' ಎಂಬ ಕಾಮನ್ ಫ್ಯಾಕ್ಟರ್ ತೆಗೆದುಹಾಕಿ 'ಮೀಸಲಾತಿಯೇ ಅರ್ಹತೆ' ಎಂಬ ಘೋಷಣೆ ಬರಬಹುದು!

ದೇಶವಳ್ಳಿ ಶಿವು. ಸಂತೇಮರಹಳ್ಳಿ

*ಹಸುಗೂಸಿನ ನಸುನಗುವಿಗೂ, ಯುವತಿಯ ಹುಸಿನಗುವಿಗೂ ಇರುವ ವ್ಯತ್ಯಾಸವೇನು?*

ಒಂದು ಬೆಳದಿಂಗಳ ತಂಬೆಳಕು, ಇನ್ನೊಂದು ಮುಂಜಾನೆಯ ಬೆಚ್ಚನೆಯ ಚೆಂಬೆಳಕು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಸುಳ್ಳು ಹೇಳುವುದರಲ್ಲಿ ಹೆಂಗಸರು ಹೆಚ್ಚೋ, ಗಂಡಸರು ಹೆಚ್ಚೋ?*

ರಾಜಕಾರಣ, ಕುಡಿತ, ಜ್ಯೋತಿಷ್ಯ ಹೇಳುವುದರಲ್ಲಿ ಹೆಚ್ಚಾಗಿ ಅವರೇ ಇರುವುದರಿಂದ – ಗಂಡಸರೇ!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಇಲ್ಲೊಂದು ಶಾಲೆಯಲ್ಲಿ 'ಜ್ಞಾನದೇಗುಲವಿದು. ಡೊನೇಷನ್ ಇದ್ದರೆ ಒಳಗೆ ಬನ್ನಿ' ಎಂದಿದೆಯಲ್ಲಾ...?*

ಸರಿಯೇ. ಎಲ್ಲೆಡೆ 'ಶುಕ್ಲಾಂಬರಧರಂ ವಿಷ್ಣುಂ' ಪ್ರಾರ್ಥನೆಯಾದರೆ ಅಲ್ಲಿ 'ಶುಲ್ಕಾಂಬರಭರಂ ವಿತ್ತಂ' ಎಂಬುದೇ ಪ್ರಾರ್ಥನೆಯಂತೆ!

ಡಾ. ವಿ. ಪುಗಳೇಂದಿ, ಸಿರುಗುಪ್ಪ

*ಸಾಗರದಲ್ಲಿ ಸರಳವಾಗಿ ಈಜಿ ಸಾಹಸ ಮಾಡುವವನೂ ಸಾಲದ ಸಾಗರದಲ್ಲಿ ಬಿದ್ದರೆ ಮುಳುಗಿಹೋಗುವುದು ಏಕೆ?*

ಬಡ್ಡಿಯ ಸುಳಿಯಲ್ಲಿ ಸಿಲುಕುವುದರಿಂದ.

## ಬಹುಮಾನಿತ ಪ್ರಶ್ನೆ

ನಾಗಮಣಿ ಸೋಮಶೇಖರ್, ಮೈಸೂರು

*ಹೆಂಗಸರಿಗೆ ಏಕೆ 60, 80 ವರ್ಷದ ಶಾಂತಿ ಮಾಡುವುದಿಲ್ಲ? ಅವರು ಮನುಷ್ಯರಲ್ಲವೆ?*

ಆ ಹೊತ್ತಿಗೆ ಗಂಡ ಪಳಗಿ, ಕಾಟ ಕೊಡುವ ಅತ್ತೆ, ಮಾವ ತೊಲಗಿ ಅವರು ಶಾಂತವಾಗೇ ಇರುತ್ತಾರಾದ್ದರಿಂದ ಶಾಂತಿ ಅಗತ್ಯವಿಲ್ಲವಂತೆ!

ಕೆ.ಯಂ. ವೀರೇಶ್, ಕೂಡ್ಲಿಗಿ

*ರಾಮ್, ನಿಮಗೊಂದು ಕಾಣಿಕೆ ಕಳುಹಿಸಬೇಕು; ಲಿಪ್‌ಸ್ಟಿಕ್ ಕಳಿಸಲೋ, ವಾಕಿಂಗ್ ಸ್ಟಿಕ್ ಕಳಿಸಲೋ?*

ನನ್ನ ವಿರೋಧಿಗಳ ಬಾಯಿ ಮುಚ್ಚಿಸಲು ಒಂದಷ್ಟು ಫೆವಿಸ್ಟಿಕ್ ಕಳಿಸಿಬಿಡಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಏಕಲವ್ಯನ ಬೆರಳು ಪಡೆದ ದ್ರೋಣಾಚಾರ್ಯರಂತಹ ಗುರುಗಳು ಈಗಲೂ ಇದ್ದಾರಾ ರಾಂ?*

ಇದ್ದಾರೆ. ಅವರನ್ನು ಪಿಹೆಚ್‌ಡಿ ಗೈಡ್‌ಗಳು ಎಂದು ಕರೆಯುತ್ತಾರೆ.

ಹೆಚ್.ಜಿ. ವಿಜಯಕುಮಾರ್, ಬೆಂಗಳೂರು

*'ದೊರೆ ಮಾಡಿದ್ದಕ್ಕೆ ದಂಡ ಇಲ್ಲ' ಎಂಬುದಕ್ಕೆ ಉತ್ತಮ ಉದಾಹರಣೆ?*




ನೋ ಪಾರ್ಕಿಂಗ್ ಬೋರ್ಡ್ ಕೆಳಗೆ ನಿಲ್ಲಿಸಿರುವ ಪೊಲೀಸ್ ವ್ಯಾನ್!

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

*ಜೇನುತುಪ್ಪಕ್ಕಿಂತ ಸಿಹಿ ಯಾವುದು? ಹಾಗಲಕಾಯಿಗಿಂತ ಕಹಿ ಯಾವುದು?*

ಸನ್ಮಾನ, ಅವಮಾನ.

ಮುರಲೀಧರ ಕುಲಕರ್ಣಿ, ಬೀದರ್

*ಹೆಂಡತಿ ಹಾಗೂ ಮೊಬೈಲ್‌ಗಳಿಗೆ ಇರುವ ಸಾಮ್ಯ ಹಾಗೂ ವ್ಯತ್ಯಾಸಗಳೇನು?*

ಎರಡೂ ಸದ್ದು ಮಾಡಿದರೆ ಕಿವಿಗೊಡಲೇಬೇಕು; ಮೊಬೈಲ್‌ಗೆ ನಾವು ಚಾರ್ಜ್ ಮಾಡಬೇಕು, ಹೆಂಡತಿ ನಮಗೆ ಚಾರ್ಜ್ ಮಾಡುತ್ತಾಳೆ.

■ ರಾಮ್